ಶ್ರೀ ಸಿ. ಕೆ. ರಾಜಯ್ಯ ಶೆಟ್ಟಿ—ತಾವು ಕೊಟ್ಟಿರುವ ಅಂಕಿ ಅಂಶಗಳ ಪ್ರಕಾರ ಒಂದು, ಎರಡು ಮೂರನೇ ಪಂಚವಾರ್ಷಿಕ ಯೋಜನಾ ಕಾರ್ಯಗಳು ನಿರ್ದಿಷ್ಟವಾದ ಕಾಲದಲ್ಲಿ ಆಗಿಲ್ಲದೇ ಇರುವುದರಿಂದ ನಿಮ್ಮ ಪ್ಲಾನ್ ಫೇಲಾಗಿದೆಯೆಂಬುದನ್ನು ಒಪ್ಪುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಎಷ್ಟರಮಟ್ಟಿಗೆ ನಮ್ಮಲ್ಲಿ ದುಡ್ಡು ಇತ್ತೋ ಅಷ್ಟರ ಮಟ್ಟಿಗೆ ಕೆಲಸ ಮಾಡಿದ್ದೇವೆ. ಇನ್ನೂ ದುಡ್ಡು ಹೆಚ್ಚು ಬೇಕಾಗಿದೆ. ಈ ವರ್ಷ ಇನ್ನೂ ಹೆಚ್ಚು ದುಡ್ಡನ್ನು ಒದಗಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತಿದ್ದೇವೆ.

———

High Level Causeway

*Q.—29. Sri B. GANGANNA (Kallambella).—

Will the Minister for Public Works be pleased to state:—

whether there is any proposal to construct a High Level Causeway or Bridge across the Halla on 10th Mile of Salkatte-Bellara Road in Chiknayakanahally Taluk ?

A.—Sri VEERENDRA PATIL (Minister for Public Works).—

Yes.

ಶ್ರೀ ಬಿ. ಗಂಗಣ್ಣ.—ಈ ಕಾಮಗಾರಿಯನ್ನು ಅದಷ್ಟು ಜಾಗ್ರತೆ ಮಾಡಿಕೊಡಬೇಕೆಂದು ರೈತರಿಂದ ಮನವಿ ಬಹಳಸಾರಿ ಬಂದಿಲ್ಲವೇ?

ಶ್ರೀ ವೀರೇಂದ್ರ ಪಾಟೀಲ್.—ರೈತರು ಅದನ್ನು ಕೇಳುತ್ತಿದ್ದಾರೆ. ನಮ್ಮಲ್ಲಿ ಹೊಸದಾಗಿ ಈ ತರಹ ಕಾಮಗಾರಿಗಳಿಗೆ ಸಾಕಷ್ಟು ದುಡ್ಡು ಇಲ್ಲ. ಇದನ್ನು ಮಾಡಿಕೊಡಬೇಕೆಂಬ ವಿಚಾರ ಇದೆ. ದುಡ್ಡು ಬಂದರೆ ಮಾಡುತ್ತೇವೆ.

ಶ್ರೀ ಬಿ. ಗಂಗಣ್ಣ.—ಈ ಕಾಮಗಾರಿಯಿಂದ ಬಹಳ ಹಳ್ಳಿಗಳಿಗೆ ಅನುಕೂಲವಾಗುವುದರಿಂದ ಈ ಕೆಲಸವನ್ನು ಈ ವರ್ಷವೇ ತೆಗೆದುಕೊಳ್ಳುವುದಕ್ಕೆ ಪ್ರಯತ್ನಮಾಡುತ್ತೀರಾ ?

ಶ್ರೀ ವೀರೇಂದ್ರ ಪಾಟೀಲ್.—ಈಗ ಶ್ರೀ ರಾಜಯ್ಯಶೆಟ್ಟಿಯವರು ಎಲ್ಲಾ ಕೆಲಸಗಳಿಗೂ ಎಲ್ಲಾ ಕಡೆಯಿಂದ ದುಡ್ಡು ಬೇಕು ಎಂದು ಸರ್ಕಾರದವರು ಕೇಳುತ್ತಾರೆಂಬುದಾಗಿ ಹೇಳಿದರು. ಆದ್ದರಿಂದ ಈಗ ರಸ್ತೆಗಳ ಹಾಗೂ ಸೇತುವೆಗಳ ಕೆಲಸವನ್ನು ಸ್ವಲ್ಪಮಟ್ಟಿಗೆ ನಿಲ್ಲಿಸಿದರೂ ಚಿಂತೆ ಇಲ್ಲ, ಇರ್ರಿಗೇಷನ್ ಬಗ್ಗೆ ಈಗ ಒಂದು ನೀತಿಯನ್ನು ಅನುಸರಿಸಿರುವುದರಿಂದ ಈತರಹ ಕಾಮಗಾರಿಯನ್ನು ಇವತ್ತು ತೆಗೆದುಕೊಳ್ಳುತ್ತೇವೆಂದು ಖಚಿತವಾಗಿ ಹೇಳುವುದಕ್ಕಾಗುವುದಿಲ್ಲ.

Sri C. K. RAJIAH SHETTY.—Why don't you take up this work immediately since it helps irrigation works round about?

ಶ್ರೀ ವೀರೇಂದ್ರಪಾಟೀಲ್.—ಎಲ್ಲವೂ ಇರ್ರಿಗೇಷನ್ ಸ್ಕೀಮ್ಸು ಎಂದು ಹೇಳುವುದಕ್ಕಾಗುತ್ತದೆಯೇ ! ಇರ್ರಿಗೇಷನ್ನಿನಲ್ಲಿ ರೋಡ್ಸ್ ಸಹ ಇರುತ್ತದೆ. ನಮ್ಮ ಅಗ್ರಿಕರ್‌ಚರಲ್ ಪ್ರೊಡ್ಯೂಸ ಸಹ ಆ ಸ್ಕೀಮಿಗೆ ಹೊಂದುತ್ತದೆ. ಆದಕ್ಕಾಗಿ ಈ ತರಹ ಕಾಮಗಾರಿಗಳಿಗೆ ಹೆಚ್ಚು ದುಡ್ಡು ಖರ್ಚು ಮಾಡುವುದಕ್ಕೆ ಸರ್ಕಾರದ ಹತ್ತಿರ ಸಾಕಷ್ಟು ಹಣವಿಲ್ಲ. ಅದಕ್ಕೋಸ್ಕರ ಇಂತಹ ಕೆಲಸಗಳು ನಿಧಾನವಾಗುತ್ತವೆ.